# “ಎರಡು ಹನಿ ಔಷಧಿ, ಕೋಟ್ಯಂತರ ಮಕ್ಕಳ ಭವಿಷ್ಯ ಉಳಿಸಿದ ಮಹಾ ಹೋರಾಟ!”

## ಜೋನಾಸ್ ಸಾಲ್ಕ್ ಮತ್ತು ಆಲ್ಬರ್ಟ್ ಸಾಬಿನ್ ಸಂಶೋಧನೆಯಿಂದ ಆರಂಭವಾದ ಆರೋಗ್ಯ ಕ್ರಾಂತಿ



ಒಂದು ಕಾಲದಲ್ಲಿ ವಿಶ್ವದಾದ್ಯಂತ ಲಕ್ಷಾಂತರ ಮಕ್ಕಳ ಬದುಕನ್ನು ಕಸಿದುಕೊಂಡಿದ್ದ ಮತ್ತು ಅನೇಕ ಮಕ್ಕಳನ್ನು ಶಾಶ್ವತ ಅಂಗವೈಕಲ್ಯಕ್ಕೆ ತಳ್ಳಿದ್ದ ಪೋಲಿಯೊ ರೋಗದ ವಿರುದ್ಧದ ಹೋರಾಟ ಇಂದು ಜಾಗತಿಕ ಸಾರ್ವಜನಿಕ ಆರೋಗ್ಯ ಕ್ಷೇತ್ರದ ಅತ್ಯಂತ ದೊಡ್ಡ ಯಶೋಗಾಥೆಗಳಲ್ಲಿ ಒಂದಾಗಿದೆ. ಕೇವಲ ಎರಡು ಹನಿ ಔಷಧಿಯ ಮೂಲಕ ಕೋಟ್ಯಾಂತರ ಮಕ್ಕಳ ಜೀವ ಮತ್ತು ಭವಿಷ್ಯವನ್ನು ರಕ್ಷಿಸಿದ “ಪಲ್ಸ್ ಪೋಲಿಯೊ” ಕಾರ್ಯಕ್ರಮವು ವಿಶ್ವ ಆರೋಗ್ಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ದಾಖಲಾದ ಅಭಿಯಾನವಾಗಿದೆ.

**ಪೋಲಿಯೊ ಎಂದರೇನು?:** ಪೋಲಿಯೊ ಅಥವಾ ಪೋಲಿಯೊಮ್ಯೆಲೈಟಿಸ್ ಎಂಬುದು ಅತ್ಯಂತ ಅಪಾಯಕಾರಿ ವೈರಸ್ ಸೋಂಕು ರೋಗವಾಗಿದೆ. ಮುಖ್ಯವಾಗಿ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಬಾಧಿಸುವ ಈ ವೈರಸ್, ದೇಹದ ನರಮಂಡಲದ ಮೇಲೆ ದಾಳಿ ಮಾಡಿ ಕೈ ಮತ್ತು ಕಾಲುಗಳಲ್ಲಿ ಶಾಶ್ವತ ಅಂಗವೈಕಲ್ಯವನ್ನು ಉಂಟುಮಾಡುವ ಸಾಮರ್ಥ್ಯ ಹೊಂದಿದೆ. ಕೆಲವು ಗಂಭೀರ ಪ್ರಕರಣಗಳಲ್ಲಿ ಈ ಸೋಂಕು ಸಾವಿಗೂ ಕಾರಣವಾಗಬಹುದು.

ಇಪ್ಪತ್ತನೇ ಶತಮಾನದ ಮಧ್ಯಭಾಗದವರೆಗೆ ವಿಶ್ವದ ಹಲವಾರು ದೇಶಗಳಲ್ಲಿ ಪೋಲಿಯೊ ದೊಡ್ಡ ಆರೋಗ್ಯ ಸಮಸ್ಯೆಯಾಗಿದ್ದು, ಪ್ರತಿವರ್ಷ ಸಾವಿರಾರು ಮಕ್ಕಳು ಈ ಕಾಯಿಲೆಗೆ ಬಲಿಯಾಗುತ್ತಿದ್ದರು. ಅನೇಕ ಕುಟುಂಬಗಳು ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಆತಂಕದಲ್ಲಿ ಬದುಕುವಂತಾಗಿತ್ತು.

**ಜಾಗತಿಕ ಪೋಲಿಯೊ ನಿರ್ಮೂಲನೆ ಅಭಿಯಾನದ ಆರಂಭ:** 1988ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ, ಯುನಿಸೆಫ್, ರೋಟರಿ ಇಂಟರ್ನ್ಯಾಷನಲ್ ಮತ್ತು ಇತರ ಜಾಗತಿಕ ಸಂಸ್ಥೆಗಳು ಸೇರಿ “ಜಾಗತಿಕ ಪೋಲಿಯೊ ನಿರ್ಮೂಲನೆ ಅಭಿಯಾನ”ವನ್ನು ಆರಂಭಿಸಿದವು. ಆ ಸಮಯದಲ್ಲಿ ವಿಶ್ವದಾದ್ಯಂತ ಪ್ರತಿವರ್ಷ ಸುಮಾರು 3.5 ಲಕ್ಷ ಮಕ್ಕಳು ಪೋಲಿಯೊ ಸೋಂಕಿಗೆ ಒಳಗಾಗುತ್ತಿದ್ದರು.

ಆದರೆ ನಿರಂತರ ಲಸಿಕಾ ಅಭಿಯಾನಗಳು, ಸರ್ಕಾರಗಳ ಬದ್ಧತೆ ಹಾಗೂ ಆರೋಗ್ಯ ಕಾರ್ಯಕರ್ತರ ಅವಿರತ ಶ್ರಮದಿಂದ ಇಂದು ವಿಶ್ವದ ಬಹುತೇಕ ರಾಷ್ಟ್ರಗಳು ಪೋಲಿಯೊ ಮುಕ್ತ ರಾಷ್ಟ್ರಗಳಾಗಿ ಘೋಷಿಸಲ್ಪಟ್ಟಿವೆ. ಜಾಗತಿಕ ಆರೋಗ್ಯ ಕ್ಷೇತ್ರದಲ್ಲಿ ಇದು ಅತ್ಯಂತ ದೊಡ್ಡ ಸಾಧನೆಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ.

**ಭಾರತದಲ್ಲಿ ಪಲ್ಸ್ ಪೋಲಿಯೊ ಅಭಿಯಾನದ ಆರಂಭ:** ಭಾರತದಲ್ಲಿ ಪೋಲಿಯೊ ವಿರುದ್ಧದ ಹೋರಾಟ ಹಲವು ದಶಕಗಳ ಹಿಂದೆಯೇ ಆರಂಭವಾಗಿತ್ತು. 1972ರಲ್ಲಿ ಪೋಲಿಯೊ ಲಸಿಕೆಯನ್ನು ರಾಷ್ಟ್ರೀಯ ಲಸಿಕಾ ಕಾರ್ಯಕ್ರಮಕ್ಕೆ ಸೇರಿಸಲಾಯಿತು. ನಂತರ 1985ರಲ್ಲಿ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ಭಾಗವಾಗಿ ದೇಶಾದ್ಯಂತ ಇದನ್ನು ವಿಸ್ತರಿಸಲಾಯಿತು.

1994ರ ಅಕ್ಟೋಬರ್ 2ರಂದು ದೆಹಲಿಯಲ್ಲಿ ಮೊದಲ ಬಾರಿಗೆ “ಪಲ್ಸ್ ಪೋಲಿಯೊ” ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ನಡೆಸಲಾಯಿತು. ಈ ಕಾರ್ಯಕ್ರಮದ ಯಶಸ್ಸಿನ ನಂತರ, 1995ರಲ್ಲಿ ಭಾರತ ಸರ್ಕಾರ ದೇಶಾದ್ಯಂತ ಪಲ್ಸ್ ಪೋಲಿಯೊ ಅಭಿಯಾನವನ್ನು ಅಧಿಕೃತವಾಗಿ ಆರಂಭಿಸಿತು.

**“ಪಲ್ಸ್ ಪೋಲಿಯೊ” ಎಂಬ ಹೆಸರಿನ ಅರ್ಥವೇನು?:**

“ಪಲ್ಸ್” ಎಂಬ ಪದವು ಒಂದೇ ಸಮಯದಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆಸುವ ಕಾರ್ಯಾಚರಣೆಯನ್ನು ಸೂಚಿಸುತ್ತದೆ. ದೇಶದಾದ್ಯಂತ ಒಂದೇ ದಿನದಲ್ಲಿ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಲ್ಲ ಮಕ್ಕಳಿಗೂ ಪೋಲಿಯೊ ಲಸಿಕೆಯನ್ನು ನೀಡುವ ವಿಶೇಷ ಕಾರ್ಯಕ್ರಮಕ್ಕೆ “ಪಲ್ಸ್ ಪೋಲಿಯೊ” ಎಂಬ ಹೆಸರನ್ನು ನೀಡಲಾಯಿತು.

ಈ ಅಭಿಯಾನದ ಮುಖ್ಯ ಉದ್ದೇಶ, ಯಾವುದೇ ಮಗುವು ಪೋಲಿಯೊ ಲಸಿಕೆಯಿಂದ ವಂಚಿತವಾಗದಂತೆ ನೋಡಿಕೊಳ್ಳುವುದಾಗಿದೆ. ಇದಕ್ಕಾಗಿ ದೇಶದ ಮೂಲೆ ಮೂಲೆಗಳಿಗೂ ಆರೋಗ್ಯ ಕಾರ್ಯಕರ್ತರು ತೆರಳಿ ಮಕ್ಕಳಿಗೆ ಎರಡು ಹನಿ ಪೋಲಿಯೊ ಔಷಧಿಯನ್ನು ನೀಡುವ ಕಾರ್ಯವನ್ನು ನಡೆಸುತ್ತಾರೆ.



**ಪೋಲಿಯೊ ಲಸಿಕೆ ಕಂಡುಹಿಡಿದ ವಿಜ್ಞಾನಿಗಳ ಸಾಧನೆ:** ಪೋಲಿಯೊ ವಿರುದ್ಧದ ಹೋರಾಟದಲ್ಲಿ ಮಹತ್ವದ ತಿರುವು ಸಿಕ್ಕಿದ್ದು 1952ರಲ್ಲಿ. ಅಮೆರಿಕದ ವಿಜ್ಞಾನಿ ಡಾ. ಜೋನಾಸ್ ಸಾಲ್ಕ್ ಅವರು ಮೊದಲ ಬಾರಿಗೆ ಪೋಲಿಯೊ ವಿರುದ್ಧದ ಲಸಿಕೆಯನ್ನು ಅಭಿವೃದ್ಧಿಪಡಿಸಿದರು. ಈ ಲಸಿಕೆಯನ್ನು ಇಂಜೆಕ್ಷನ್ ಮೂಲಕ ನೀಡಲಾಗುತ್ತಿತ್ತು ಮತ್ತು ಇದು ಪೋಲಿಯೊ ನಿಯಂತ್ರಣದಲ್ಲಿ ಮಹತ್ವದ ಪಾತ್ರ ವಹಿಸಿತು.

ನಂತರ 1961ರಲ್ಲಿ ಮತ್ತೊಬ್ಬ ವಿಜ್ಞಾನಿ ಡಾ. ಆಲ್ಬರ್ಟ್ ಸಾಬಿನ್ ಅವರು ಬಾಯಿಯ ಮೂಲಕ ನೀಡಬಹುದಾದ ಪೋಲಿಯೊ ಲಸಿಕೆಯನ್ನು ಅಭಿವೃದ್ಧಿಪಡಿಸಿದರು. ಇಂದು ವಿಶ್ವದಾದ್ಯಂತ ನೀಡಲಾಗುತ್ತಿರುವ “ಎರಡು ಹನಿ ಪೋಲಿಯೊ ಔಷಧಿ” ಇದೇ ಸಂಶೋಧನೆಯ ಫಲವಾಗಿದೆ. ಈ ಆವಿಷ್ಕಾರವು ಜಾಗತಿಕ ಮಟ್ಟದಲ್ಲಿ ಪೋಲಿಯೊ ನಿರ್ಮೂಲನೆಗೆ ಹೊಸ ದಿಕ್ಕು ತೋರಿಸಿತು.

**ಭಾರತದ ಐತಿಹಾಸಿಕ ಸಾಧನೆ:** ಭಾರತದ ಪೋಲಿಯೊ ನಿರ್ಮೂಲನೆ ಹೋರಾಟದ ಫಲವಾಗಿ, ದೇಶದಲ್ಲಿ ಕೊನೆಯ ವೈಲ್ಡ್ ಪೋಲಿಯೊ ಪ್ರಕರಣವು 2011ರ ಜನವರಿ 13ರಂದು ಪಶ್ಚಿಮ ಬಂಗಾಳದಲ್ಲಿ ದಾಖಲಾಗಿತ್ತು. ಅದರ ನಂತರ ದೇಶದಲ್ಲಿ ಯಾವುದೇ ಹೊಸ ವೈಲ್ಡ್ ಪೋಲಿಯೊ ಪ್ರಕರಣಗಳು ಪತ್ತೆಯಾಗಲಿಲ್ಲ.

ಈ ಸಾಧನೆಯನ್ನು ಪರಿಗಣಿಸಿ, 2014ರ ಮಾರ್ಚ್ 27ರಂದು ವಿಶ್ವ ಆರೋಗ್ಯ ಸಂಸ್ಥೆ ಭಾರತವನ್ನು ಅಧಿಕೃತವಾಗಿ “ಪೋಲಿಯೊ ಮುಕ್ತ ರಾಷ್ಟ್ರ” ಎಂದು ಘೋಷಿಸಿತು. ಇದು ಭಾರತದ ಸಾರ್ವಜನಿಕ ಆರೋಗ್ಯ ವ್ಯವಸ್ಥೆ, ಆರೋಗ್ಯ ಕಾರ್ಯಕರ್ತರು ಮತ್ತು ದೇಶದ ಜನರ ಒಗ್ಗಟ್ಟಿನ ಪ್ರಯತ್ನಕ್ಕೆ ಸಂದ ದೊಡ್ಡ ಗೌರವವಾಗಿದೆ.

**ಇನ್ನೂ ಪಲ್ಸ್ ಪೋಲಿಯೊ ಅಭಿಯಾನ ಯಾಕೆ ಅಗತ್ಯ?:** ಭಾರತ ಪೋಲಿಯೊ ಮುಕ್ತ ರಾಷ್ಟ್ರವಾಗಿದ್ದರೂ, ವಿಶ್ವದ ಕೆಲವು ಭಾಗಗಳಲ್ಲಿ ಇನ್ನೂ ಪೋಲಿಯೊ ವೈರಸ್ ಅಸ್ತಿತ್ವದಲ್ಲಿದೆ. ಹೀಗಾಗಿ ವೈರಸ್ ಮತ್ತೆ ದೇಶಕ್ಕೆ ಪ್ರವೇಶಿಸುವ ಅಪಾಯವನ್ನು ಸಂಪೂರ್ಣವಾಗಿ ತಡೆಯಲು, ದೇಶದಲ್ಲಿ ಪಲ್ಸ್ ಪೋಲಿಯೊ ಕಾರ್ಯಕ್ರಮವನ್ನು ನಿರಂತರವಾಗಿ ನಡೆಸಲಾಗುತ್ತಿದೆ.

ಆರೋಗ್ಯ ತಜ್ಞರ ಪ್ರಕಾರ, ಪ್ರತಿಯೊಂದು ಮಗುವಿಗೂ ಪ್ರತಿಬಾರಿಯೂ ಪೋಲಿಯೊ ಹನಿಯನ್ನು ನೀಡುವುದು ಅತ್ಯಗತ್ಯ. ಇದು ದೇಶದ ಭವಿಷ್ಯದ ಪೀಳಿಗೆಯನ್ನು ಪೋಲಿಯೊ ಮುಕ್ತವಾಗಿಡಲು ಅತ್ಯಂತ ಪರಿಣಾಮಕಾರಿ ಮಾರ್ಗವಾಗಿದೆ.

**ಪೋಷಕರಿಗೆ ಆರೋಗ್ಯ ಇಲಾಖೆಯ ಮನವಿ:** ಆರೋಗ್ಯ ಇಲಾಖೆ ಮತ್ತು ತಜ್ಞರು ಪೋಷಕರಿಗೆ ಒಂದು ಪ್ರಮುಖ ಸಂದೇಶವನ್ನು ನೀಡುತ್ತಿದ್ದಾರೆ. ಒಂದು ಸಣ್ಣ ನಿರ್ಲಕ್ಷ್ಯವೂ ಮಗುವಿನ ಭವಿಷ್ಯದ ಮೇಲೆ ದೊಡ್ಡ ಪರಿಣಾಮ ಬೀರಬಹುದು. ಆದ್ದರಿಂದ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಪ್ರತಿಯೊಂದು ಮಗುವಿಗೂ ಪ್ರತಿಯೊಂದು ಪಲ್ಸ್ ಪೋಲಿಯೊ ಅಭಿಯಾನದಲ್ಲಿ ತಪ್ಪದೇ ಎರಡು ಹನಿ ಪೋಲಿಯೊ ಔಷಧಿಯನ್ನು ನೀಡಬೇಕು ಎಂದು ಮನವಿ ಮಾಡಲಾಗಿದೆ.

**“ಎರಡು ಹನಿ ಜೀವನದ ರಕ್ಷಣೆ”:** “ಪ್ರತಿ ಮಗು–ಪ್ರತಿ ಬಾರಿ–ಎರಡು ಹನಿ ಪೋಲಿಯೊ ಔಷಧಿ”

ಎಂಬ ಸಂದೇಶದೊಂದಿಗೆ ಪಲ್ಸ್ ಪೋಲಿಯೊ ಅಭಿಯಾನವು ಇಂದು ಕೂಡ ದೇಶದ ಆರೋಗ್ಯ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.



# ನಿವೃತ್ತ ಮುಖ್ಯ ಶಿಕ್ಷಕರಿಗೆ ಹೂವಿನ ಸುರಿಮಳೆ ಸುರಿಸುವ ಮೂಲಕ ನಿವೃತ್ತಿ ಬಿಳ್ಕೊಡುಗೆ!



**ಕೃಷ್ಣರಾಜಪೇಟೆ:** ತಾಲೂಕಿನ ಬಳ್ಳೇಕೆರೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಸುದೀರ್ಘ ಹಾಗೂ ಯಶಸ್ವಿ ಸೇವೆ ಸಲ್ಲಿಸಿ ನಿವೃತ್ತರಾಗುತ್ತಿರುವ ಮುಖ್ಯ ಶಿಕ್ಷಕ ಬಿ.ಆರ್. ವೆಂಕಟೇಶ್ ಅವರಿಗೆ ಶಾಲಾ ಆವರಣದಲ್ಲಿ ಅತ್ಯಂತ ವಿಜೃಂಭಣೆಯ ಹಾಗೂ ಭಾವುಕ ನಿವೃತ್ತಿ ಬಿಳ್ಕೊಡುಗೆ ಮತ್ತು ಸನ್ಮಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

**ವಿದ್ಯಾರ್ಥಿಗಳಿಂದ ಹೂವಿನ ಸುರಿಮಳೆ, ಕಳಸದ ಗೌರವ:** ಸಮಾರಂಭದ ಆರಂಭದಲ್ಲಿ ಶಾಲೆಯ ಮುಖ್ಯ ದ್ವಾರದಿಂದಲೇ ನೆಚ್ಚಿನ ಗುರುಗಳಾದ ಬಿ.ಆರ್. ವೆಂಕಟೇಶ್ ಅವರ ಮೇಲೆ ವಿದ್ಯಾರ್ಥಿಗಳು ಹೂವಿನ ಸುರಿಮಳೆಗರೆದರು. ವಿದ್ಯಾರ್ಥಿನಿಯರು ಕಳಸ ಹೊತ್ತು, ಗೌರವ ಪೂರ್ವಕವಾಗಿ ನೆಚ್ಚಿನ ಶಿಕ್ಷಕರನ್ನು ವೇದಿಕೆಯತ್ತ ಕರೆತಂದ ದೃಶ್ಯ ಎಲ್ಲರ ಗಮನ ಸೆಳೆಯಿತು.

**ಸಹೋದ್ಯೋಗಿಗಳಿಂದ ವಿಜೃಂಭಣೆಯ ಸನ್ಮಾನ:** ತಾಲೂಕಿನ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರ ತಂಡವು ನಿವೃತ್ತ ಮುಖ್ಯ ಶಿಕ್ಷಕ ಬಿ.ಆರ್. ವೆಂಕಟೇಶ್ ಅವರಿಗೆ ಶಾಲು ಹೊದಿಸಿ, ಫಲಪುಷ್ಪ ನೀಡಿ ಅತ್ಯಂತ ಗೌರವದಿಂದ ಸನ್ಮಾನಿಸಿ. ವೆಂಕಟೇಶ್ ಅವರ ಶೈಕ್ಷಣಿಕ ಸೇವೆ ಮತ್ತು ಕರ್ತವ್ಯ ನಿಷ್ಠೆಯನ್ನು ಸ್ಮರಿಸಿದ ಶಿಕ್ಷಕ ವೃಂದವು ಅವರ ಮುಂದಿನ ನಿವೃತ್ತ ಜೀವನವು ಸುಖ, ಶಾಂತಿ ಮತ್ತು ಆರೋಗ್ಯದಿಂದ ಕೂಡಿರಲಿ ಎಂದು ಶುಭ ಹಾರೈಸಿತು,

**ಹಳೆಯ ವಿದ್ಯಾರ್ಥಿಗಳಿಂದ ಗುರುನಮನ – ನೆನಪುಗಳ ಸಾಗರ:** ಇದೇ ಸಂದರ್ಭದಲ್ಲಿ ಬಳ್ಳೇಕೆರೆ ಸರ್ಕಾರಿ ಪ್ರೌಢಶಾಲೆಯಲ್ಲಿ 2010ನೇ ಸಾಲಿನಲ್ಲಿ ವ್ಯಾಸಂಗ ಮಾಡಿದ್ದ ಹಳೆಯ ವಿದ್ಯಾರ್ಥಿ ಬಳಗದ ವತಿಯಿಂದ ತಮ್ಮ ನೆಚ್ಚಿನ ಗುರುವಿಗೆ ವಿಶೇಷ ಸನ್ಮಾನ ಹಮ್ಮಿಕೊಳ್ಳಲಾಗಿತ್ತು. ಹಳೆಯ ವಿದ್ಯಾರ್ಥಿಗಳು ತಮ್ಮ ಶಾಲಾ ದಿನಗಳ ಮಧುರ ನೆನಪುಗಳನ್ನು ಹಂಚಿಕೊಂಡು ವೇದಿಕೆಯಲ್ಲೇ ಭಾವುಕರಾದರು.

**ಉತ್ತಮ ಶಿಕ್ಷಕ ಸಮಾಜಕ್ಕೆ ಬೆಳಕು: ಕಮನಹಳ್ಳಿ ರವಿ;** ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ ಅಧ್ಯಕ್ಷರಾದ ರವಿ ಕಾಮನಹಳ್ಳಿ ಅವರು ಬಿ.ಆರ್. ವೆಂಕಟೇಶ್ ಅವರ ಸೇವಾವಧಿಯಲ್ಲಿ ಶಾಲೆಯು ಕಂಡ ಪ್ರಗತಿ ಹಾಗೂ ವಿದ್ಯಾರ್ಥಿಗಳ ಮೇಲಾದ ಸಕಾರಾತ್ಮಕ ಪರಿಣಾಮಗಳು ಶ್ಲಾಘನೀಯ. ಒಬ್ಬ ಉತ್ತಮ ಶಿಕ್ಷಕ ಇಡೀ ಸಮಾಜಕ್ಕೆ ಬೆಳಕಾಗಬಲ್ಲರು. ವೆಂಕಟೇಶ್ ಅವರ ಸೇವೆ ನಮ್ಮ ಬಳ್ಳೇಕೆರೆ ಗ್ರಾಮ ಮತ್ತು ಶಾಲೆಗೆ ಅಪಾರವಾದುದು ಎಂದು ಕೃತಜ್ಞತೆ ಸಲ್ಲಿಸಿದರು.

**ನಾನು ಸದಾ ಋಣಿ – ಬಿ.ಆರ್. ವೆಂಕಟೇಶ್:** ಸನ್ಮಾನ ಸ್ವೀಕರಿಸಿ ಅತ್ಯಂತ ಭಾವುಕರಾಗಿ ಮಾತನಾಡಿದ ನಿವೃತ್ತ ಮುಖ್ಯ ಶಿಕ್ಷಕ ಬಿ.ಆರ್. ವೆಂಕಟೇಶ್ ಅವರು ನನ್ನ ಸುದೀರ್ಘ ಸೇವಾವಧಿಯಲ್ಲಿ ಸಹಕರಿಸಿದ ಎಲ್ಲಾ ಶಿಕ್ಷಕ ವೃಂದದವರಿಗೂ, ಅಪಾರ ಪ್ರೀತಿ ತೋರಿದ ಪ್ರಸ್ತುತ ಹಾಗೂ ಹಳೆಯ ವಿದ್ಯಾರ್ಥಿ ಬಳಗಕ್ಕೂ ಮತ್ತು ಗ್ರಾಮದ ಎಲ್ಲಾ ಸಾರ್ವಜನಿಕರಿಗೂ ನಾನು ಸದಾ ಋಣಿಯಾಗಿದ್ದೇನೆ ಎಂದು ಹೃದಯಾಳದ ಧನ್ಯವಾದಗಳನ್ನು ಸಮರ್ಪಿಸಿದರು.

ಸಮಾರಂಭದಲ್ಲಿ ತಾಲೂಕಿನ ಎಲ್ಲಾ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳು, ಅಕ್ಕಪಕ್ಕದ ಗ್ರಾಮಸ್ಥರು ಹಾಗೂ ಅಪಾರ ಸಂಖ್ಯೆಯ ಸಾರ್ವಜನಿಕರು ಉಪಸ್ಥಿತರಿದ್ದು, ನೆಚ್ಚಿನ ಶಿಕ್ಷಕರಿಗೆ ಗೌರವ ವಂದನೆ ಸಲ್ಲಿಸಿದರು.

ನನ್ನ ಸುದೀರ್ಘ ಶೈಕ್ಷಣಿಕ ಸೇವಾವಧಿಯಲ್ಲಿ ಬಳ್ಳೇಕೆರೆ ಗ್ರಾಮ ಮತ್ತು ಅಕ್ಕ-ಪಕ್ಕದ ಗ್ರಾಮಸ್ಥರು ಹಾಗೂ ಸಾರ್ವಜನಿಕರು, ಪೋಷಕರು ಮತ್ತು ಶಾಲಾ ಅಭಿವೃದ್ಧಿ ಸಮಿತಿಯವರು ನೀಡಿದ ಸಹಕಾರ ಅಪಾರವಾದುದು. ಈ ಗ್ರಾಮ ಮತ್ತು ಇಲ್ಲಿನ ಜನರ ಪ್ರೀತಿಗೆ ನಾನು ಸದಾ ಋಣಿಯಾಗಿದ್ದೇನೆ.

ಇವತ್ತು ಹಳೆಯ ವಿದ್ಯಾರ್ಥಿಗಳು ಹಾಗೂ ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ಮಕ್ಕಳು ತೋರ್ಪಡಿಸಿದ ಈ ಅಭೂತಪೂರ್ವ ಪ್ರೀತಿ ಮತ್ತು ಗೌರವ ನನ್ನ ಕಣ್ಣಲ್ಲಿ ನೀರು ತರಿಸಿದೆ. ಒಬ್ಬ ಶಿಕ್ಷಕನಿಗೆ ತನ್ನ ವಿದ್ಯಾರ್ಥಿಗಳ ಯಶಸ್ಸು ಮತ್ತು ಅವರು ತೋರುವ ಗೌರವಕ್ಕಿಂತ ದೊಡ್ಡ ಆಸ್ತಿ ಮತ್ತೊಂದಿಲ್ಲ.

ನನ್ನ ಕರ್ತವ್ಯದ ಅವಧಿಯಲ್ಲಿ ಹೆಗಲಿಗೆ ಹೆಗಲು ಕೊಟ್ಟು ಶಾಲೆಯ ಪ್ರಗತಿಗೆ ಶ್ರಮಿಸಿದ ತಾಲೂಕಿನ ಎಲ್ಲಾ ಮುಖ್ಯ ಶಿಕ್ಷಕರಿಗೂ ಮತ್ತು ನನ್ನ ಶಾಲೆಯ ಸಹ ಶಿಕ್ಷಕ ವೃಂದಕ್ಕೂ ನನ್ನ ಹೃದಯಾಳದ ಧನ್ಯವಾದಗಳು.

ಈ ಸುಂದರ ನೆನಪುಗಳು ನನ್ನ ನಿವೃತ್ತ ಜೀವನದಾದ್ಯಂತ ನನ್ನೊಂದಿಗಿರುತ್ತವೆ.



**ನಿವೃತ್ತ ಮುಖ್ಯ ಶಿಕ್ಷಕ ಬಿ.ಆರ್. ವೆಂಕಟೇಶ್,**

# ಘೋಷಣೆಗೂ ಮುನ್ನ ಗಿಲ್ಲಿಗೆ ನಾನೇ ಹೀರೋಯಿನ್ ಎಂದ ಕಾವ್ಯ?



ಬಿಗ್‌ಬಾಸ್‌ನಲ್ಲಿ ಸಿಕ್ಕಾಪಟ್ಟೆ ಸೆನ್ಸೇಷನ್ ಕ್ರಿಯೇಟ್ ಮಾಡಿದ ಜೋಡಿ ಅಂದ್ರೆ ಅದು ಗಿಲ್ಲಿ ಹಾಗೂ ಕಾವ್ಯ ಪೇರ್. ಬಿಗ್‌ಬಾಸ್‌ನಿಂದ ಹೊರಬಂದ ಮೇಲೂ ಇವರ ಕ್ರೇಜ್ ಕಮ್ಮಿಯಾಗಿರಲಿಲ್ಲ. ಈಗಾಗಲೇ ಗಿಲ್ಲಿ ನಟ ಮೊದಲ ಬಾರಿಗೆ ನಾಯಕನಾಗಿ ನಟಿಸಿರುವ ಚಿತ್ರಕ್ಕೆ ಮುಹೂರ್ತವೂ ನಡೆದಿದ್ದು, ಅದಕ್ಕೆ ‘ಪಳಾರ್’ ಎಂದು ಶೀರ್ಷಿಕೆ ಇಡಲಾಗಿದೆ.

ಈ ಚಿತ್ರಕ್ಕೆ ಕಾವ್ಯ ಶೈವ ನಾಯಕಿ ಎಂಬ ಅನುಮಾನ ಕೇಳಿಬಂದಿತ್ತು. ನಾಯಕಿಯ ಕುರಿತಾಗಿ ಚಿತ್ರತಂಡ ಜೋಕ್ ವಿಡಿಯೋವನ್ನೂ ರಿವೀಲ್ ಮಾಡಿತ್ತು. ಇದೀಗ ಕಾವ್ಯ ಶೈವ ಫ್ಯಾನ್ಸ್ ಪೇಜ್‌ನಲ್ಲಿ ಹೊಸ ಪೋಸ್ಟ್ ಭಾರೀ ಕುತೂಹಲಕ್ಕೆ ದಾರಿ ಮಾಡಿಕೊಟ್ಟಿದೆ.

‘ಪಳಾರ್’ ಹೀರೋಯಿನ್ ಕಮಿಂಗ್ ಸೂನ್ ಎಂದು ಪೋಸ್ಟ್ ಹಾಕಲಾಗಿದ್ದು, ಇದು ಕಾವ್ಯ ಅವರ ಅಧಿಕೃತ ಪೇಜ್ ಅಲ್ಲ ಎಂಬುದು ತಿಳಿಯದೆ, ಕಾವ್ಯ ಅವರೇ ‘ಪಳಾರ್’ ಚಿತ್ರಕ್ಕೆ ನಾಯಕಿ ಎಂಬ ಸುದ್ದಿ ವೈರಲ್ ಆಗುತ್ತಿದೆ. ಫ್ಯಾನ್ಸ್ ಪೇಜ್‌ನಲ್ಲಿ ನಾಯಕಿಯ ಮುಖ ತೋರಿಸದೆ ರಹಸ್ಯ ಕಾಪಾಡಿಕೊಂಡಿದ್ದಾರೆ. ‘ಆದಷ್ಟು ಬೇಗ’ ಎಂಬ ಬರಹದೊಂದಿಗೆ, ‘ನೀವು ಕಾಯ್ತಿರೋ ಹೀರೋಯಿನ್ ಆದಷ್ಟು ಬೇಗ ಬರ್ತಾರೆ’ ಎಂದು ಉಲ್ಲೇಖಿಸಲಾಗಿದೆ. ಇದೇ ಈಗ ಭಾರೀ ಚರ್ಚೆಗೆ ಕಾರಣವಾಗಿದೆ.

ಅಂದಹಾಗೆ, ಹೀರೋಯಿನ್ ಕುರಿತು ಕಾವ್ಯ ಅವರ ಅಧಿಕೃತ ಪೇಜ್, ಗಿಲ್ಲಿ ಅಥವಾ ಪ್ರೊಡಕ್ಷನ್ ಹೌಸ್‌ನಿಂದ ಯಾವುದೇ ಅಧಿಕೃತ ಘೋಷಣೆ ಆಗಿಲ್ಲ.

ಗಿಲ್ಲಿ ಅವರ ಚೊಚ್ಚಲ ಚಿತ್ರಕ್ಕೆ ಕಾವ್ಯ ನಾಯಕಿ ಎಂದೇ ಜೋರಾಗಿ ಸುದ್ದಿ ಕೇಳಿಬರುತ್ತಿದೆ. ಸಿನಿಮಾ ಸೆಟ್ಟೇರುವುದಕ್ಕೂ ಮುನ್ನವೇ ಫೋಟೋಶೂಟ್ ಕೂಡ ನಡೆದಿದೆ ಎಂಬ ಮಾಹಿತಿ ಇದೆ. ಆದರೆ ಇನ್ನೂ ಚಿತ್ರತಂಡದಿಂದ ಅಧಿಕೃತ ಘೋಷಣೆ ನಡೆದಿಲ್ಲ.

ಇದರ ನಡುವೆ, ಕಾವ್ಯ ಅವರ ಇನ್‌ಸ್ಟಾಗ್ರಾಂ ಫ್ಯಾನ್ಸ್ ಪೇಜ್‌ನಲ್ಲಿ ಹೊಚ್ಚ ಹೊಸ ಪೋಸ್ಟರ್ ಸದ್ದು ಮಾಡುತ್ತಿದೆ. ಇದು ಎಐ ಇಮೇಜ್ ಎಂಬ ಅನುಮಾನವೂ ಶುರುವಾಗಿದೆ. ಆದರೂ ಇದೇ ನಿಜ ಎಂದು ನಂಬಿರುವ ಗಿಲ್ಲಿ ಫ್ಯಾನ್ಸ್ ಕಾಮೆಂಟ್ ಸೆಕ್ಷನ್‌ನಲ್ಲಿ ಥರ ಥರವಾಗಿ ಪ್ರತಿಕ್ರಿಯೆ ನೀಡಿ, “ನಮ್ಮ ಊಹೆಯೇ ಸರಿ ಆಗಿದೆ” ಎಂದು ಖುಷಿ ವ್ಯಕ್ತಪಡಿಸುತ್ತಿದ್ದಾರೆ.

ಒಟ್ಟಿನಲ್ಲಿ ಇದು ಒಂದು ಪ್ರಚಾರದ ಸ್ಟ್ರಾಟೆ–ಜಿಯಾ ಅಥವಾ ಕಾವ್ಯ ಶೈವ ಅವರೇ ಗಿಲ್ಲಿ ಚಿತ್ರಕ್ಕೆ ಹೀರೋಯಿನ್ನಾ ಎಂಬ ಪ್ರಶ್ನೆಗೆ ಉತ್ತರ ಸಿಗಲು ಇನ್ನೂ ಸ್ವಲ್ಪ ದಿನ ಕಾಯಲೇಬೇಕಾಗಿದೆ.




# ಜಿಬಿಎ ಸಭೆಯಲ್ಲಿ ಅಧಿಕಾರಿಗಳ ಮೇಲೆ ಸಚಿವ ಕೃಷ್ಣಭೈರೇಗೌಡ ಗರಂ



**ಬೆಂಗಳೂರು:** ನಾಯಿಗಳ ಸಂತಾನ ಹರಣ ಕಾರ್ಯಕ್ರಮದ ವಿಚಾರವಾಗಿ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣಭೈರೇಗೌಡ ಅಧಿಕಾರಿಗಳನ್ನು ತರಾಟೆಗೆ ಪಡೆದ ಘಟನೆ ನಡೆದಿದೆ. ಜಿಬಿಎ ಸಭೆಗೆ ಅಂಕಿಅಂಶಗಳು ಇಲ್ಲದೆ ಬರಿಗೈನಲ್ಲಿ ಬಂದ ಆಫೀಸರ್‌ಗಳ ವಿರುದ್ಧ ಗರಂ ಆದ ಸಚಿವರು, ಪಶುಸಂಗೋಪನೆ ಇಲಾಖೆಯಲ್ಲಿ 19 ಜನ ಅಧಿಕಾರಿಗಳಿದ್ದು ಸಚಿವರ ಸಭೆಗೆ ಕನಿಷ್ಠ ಡಾಟಾವೂ ಇಲ್ಲದೇ ಬಂದಿದ್ದೀರ? ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. 20 ವರ್ಷದಿಂದಲೂ ಸಂತಾನ ಹರಣ ಮಾಡಿಯೂ ನಾಯಿಗಳ ಸಂಖ್ಯೆ ಅಷ್ಟೇ ಇರಲು ಹೇಗೆ ಸಾಧ್ಯ? ನಾನೇನು ಕಿವಿಯಲ್ಲಿ ದಾಸವಾಳ ಇಟ್ಟುಕೊಂಡು ಕೂತಿದ್ದೀನಾ? ಎಂದು ಅಧಿಕಾರಿಗಳ ಅಸಂಬದ್ಧ ಉತ್ತರಕ್ಕೆ ಸಚಿವರು ಕಿಡಿ ಕಾರಿದ್ದಾರೆ.

**ಇರುವ ನಾಯಿಗಳಿಗಿಂತ ಹೆಚ್ಚಾಗಿ ಸಂತಾನಹರಣ ಚಿಕಿತ್ಸೆ!:** ಸಭೆ ಬಳಿಕ ಸುದ್ದಿಗೋಷ್ಠಿ ನಡೆಸಿ ಚರ್ಚೆ ಸಂಬಂಧ ಮಾಹಿತಿ ನೀಡಿದ ಸಚಿವರು, ಬೀದಿ ನಾಯಿಗಳ ಸಮಸ್ಯೆಗೆ ಕಾನೂನಾತ್ಮಕ ಪರಿಹಾರ ಮತ್ತು ನಗರದಲ್ಲಿ ಗಿಡ ನೆಡುವ ಕಾರ್ಯದ ವಿಚಾರವಾಗಿ ಸುದೀರ್ಘ ಚರ್ಚೆ ಆಗಿದೆ. ನಗರದಲ್ಲಿ ಬೀದಿ ನಾಯಿಗಳ ಸಮಸ್ಯೆ ಕಳೆದ 50 ವರ್ಷಗಳಿಂದ ಇದ್ದು, ನಾನು ಕಾಲೇಜು ದಿನಗಳಿಂದ ಈ ಸಮಸ್ಯೆ ನೋಡುತ್ತಿದ್ದೇನೆ. 2000ನೇ ಇಸವಿಯಿಂದಲೂ ನಾಯಿಗಳ ಸಂತಾನ ಹರಣ ಚಿಕಿತ್ಸೆ ಆಗುತ್ತಿದೆ. ಈ ಸಂಬಂಧ ಅಧಿಕಾರಿಗಳಿಂದ ಮಾಹಿತಿ ಕೇಳಿದ್ದು, ಬಿಬಿಎಂಪಿ ಆದ ಬಳಿಕ 8.80 ಲಕ್ಷ ನಾಯಿಗಳಿಗೆ ಮತ್ತು 2016ರಿಂದ 2023ರ ವರೆಗೆ 3.33 ಲಕ್ಷ ನಾಯಿಗಳಿಗೆ ಸಂತಾನ ಹರಣ ಚಿಕಿತ್ಸೆ ಆಗಿದೆ ಎಂದಿದ್ದಾರೆ. 2019ರ ಸರ್ವೆ ಪ್ರಕಾರ 3.10 ಲಕ್ಷ, 2023ರ ಸರ್ವೆ ಪ್ರಕಾರ 2.79 ಲಕ್ಷ ಬೀದಿ ನಾಯಿಗಳು ಇವೆ. ಇವರು ಹೇಳುತ್ತಿರುವ ಪ್ರಕಾರ ಇರುವ ನಾಯಿಗಳಿಗಿಂತ ಹೆಚ್ಚಾಗಿ ಸಂತಾನಹರಣ ಚಿಕಿತ್ಸೆ ನಡೆದಿದ್ದು, ಈ ಕುರಿತಾಗಿ ಅಧಿಕಾ–ರಿಗಳ ಬಳಿ ಸಮರ್ಪಕ ಮಾಹಿತಿ ಇಲ್ಲ. ಕಳೆದ 5 ವರ್ಷಗಳಲ್ಲಿ 42 ಕೋಟಿ ಇದಕ್ಕಾಗಿ ಖರ್ಚು ಮಾಡಿದ್ದಾರೆ . ಜನರ ತೆರಿಗೆ ದುಡ್ಡು ಖರ್ಚಾಗುತ್ತಲೇ ಇದೆ. ಆದರೆ ನಾಯಿಗಳ ಸಂತಾನ ಮುಂದುವರೆದಿದೆ ಎಂದವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ಸಂತಾನಹರಣ ಚಿಕಿತ್ಸೆ ಸಂಖ್ಯೆ ದ್ವಿಗುಣಕ್ಕೆ ಸೂಚನೆ:** ಬೀದಿ ನಾಯಿಗಳ ಸಂತಾನ ಹರಣ ಚಿಕಿತ್ಸೆ ಸಂಖ್ಯೆ ದ್ವಿಗುಣಕ್ಕೆ ಸೂಚಿಸಿದ್ದೇನೆ. ಇದಕ್ಕೆ ಬೇಕಾದ ಮೂಲ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳಿ ಅಂತಲೂ ಹೇಳಿದ್ದೇನೆ. ಜೊತೆಗೆ ಬೇರೆ ಸಂಸ್ಥೆಗಳನ್ನು ಆಹ್ವಾನ ಮಾಡಬಹುದು. ವೈದ್ಯಕೀಯ ಸಿಬ್ಬಂದಿ ಸಾಲದೇ ಹೋದರೆ ಹೊರಗುತ್ತಿಗೆ ಮೇಲೆ ಮಾಡಿ ಎಂದೂ ಅಧಿಕಾರಿಗಳಿಗೆ ತಿಳಿಸಿರೋದಾಗಿ ಸಚಿವರು ಹೇಳಿದ್ದಾರೆ.

**‘ನೆಟ್ಟ ಗಿಡಗಳು ಇಲ್ಲಿ ಹೋದವು?’:** 2008ರಿಂದ 20 ಲಕ್ಷ ಗಿಡ ನೆಟ್ಟಿದ್ದೇವೆ ಎಂದು ಹೇಳುತ್ತಾರೆ. ಮರಗಣತಿ ಪ್ರಕಾರ ಎಷ್ಟು ಆಗಿದೆ ಅಂತ ಕೇಳಿದರೆ 9 ಲಕ್ಷ ಮರಗಳು ಇವೆಯೆಂದು ಇವರೇ ಹೇಳುತ್ತಿದ್ದಾರೆ. ಹಾಗಾದರೆ ನೆಟ್ಟ ಗಿಡಗಳು ಎಲ್ಲಿ ಹೋದವು? ಎಂದೂ ಸಚಿವ ಕೃಷ್ಣಭೈರೇಗೌಡ ಪ್ರಶ್ನಿಸಿದ್ದಾರೆ. ಒಂದು ಗಿಡ ಬೆಳೆಸಲು 2,300 ರೂಪಾಯಿ ಖರ್ಚಾಗುತ್ತೆ. ಅರಣ್ಯ ಕಾರ್ಯಕ್ರಮದಲ್ಲಿ ನೆಟ್ಟರೆ 3,300 ರೂ. ವೆಚ್ಚ ಮಾಡುತ್ತೇವೆ. ಗುಂಡಿ ತೊಡೋಕೆ 300 ರೂ., 1064 ರೂ. ನೀರು ಹಾಕಲು, ಟ್ರೀ ಗಾರ್ಡ್ ಹಾಕೋಕೆ 452 ರೂ. ಸೇರಿ 3 ವರ್ಷದ ನಿರ್ವಹಣೆಗೆ ಹಣ ವ್ಯಯಮಾಡಲಾಗುತ್ತೆ. 2.5 ಅಡಿ ಆಳ 2.5 ಅಡಿ ಉದ್ದ ತೆಗೆದು ಗಿಡ ನೆಡಬೇಕು ಎಂದಿದೆ. ಆದರೆ ನನ್ನ ಕ್ಷೇತ್ರದಲ್ಲಿ ಈ ರೀತಿ ನೆಟ್ಟಿರೋದನ್ನು ನಾನು ನೋಡಿಲ್ಲ ಎಂದು ಸಚಿವರು ಹೇಳಿದ್ದಾರೆ.

ಸಚಿವ ಕೃಷ್ಣಭೈರೇಗೌಡ ಅವರ ಈ ತೀವ್ರ ಅಸಮಾಧಾನದಿಂದ ಬಿಬಿಎಂಪಿ ಮತ್ತು ಸಂಬಂಧಿತ ಇಲಾಖೆಗಳ ಕಾರ್ಯವೈಖರಿ ಮತ್ತೊಮ್ಮೆ ಪ್ರಶ್ನೆಗೆ ಒಳಗಾಗಿದೆ. ಸಾರ್ವಜನಿಕರ ತೆರಿಗೆ ಹಣವನ್ನು ಪರಿಣಾಮಕಾರಿಯಾಗಿ ಬಳಸಲಾಗುತ್ತಿದೆಯೇ ಎಂಬ ಕುರಿತು ಸಮಗ್ರ ಪರಿಶೀಲನೆ ನಡೆಸುವ ಅಗತ್ಯವಿದೆ ಎಂದು ಸಚಿವರು ಸೂಚಿಸಿದ್ದಾರೆ. ಬೀದಿ ನಾಯಿಗಳ ನಿಯಂತ್ರಣ, ನಗರ ಹಸಿರೀಕರಣ ಹಾಗೂ ಸಾರ್ವಜನಿಕ ಕಲ್ಯಾಣ ಯೋಜನೆಗಳ ಅನುಷ್ಠಾನದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿರುವ ಅವರು, ಮುಂದಿನ ಸಭೆಯಲ್ಲಿ ಸಮಗ್ರ ಅಂಕಿಅಂಶಗಳು ಮತ್ತು ಕಾರ್ಯಪ್ರಗತಿ ವರದಿಯೊಂದಿಗೆ ಹಾಜರಾಗುವಂತೆ ಸೂಚಿಸಿದ್ದಾರೆ.

# ಯಶ್‌ಗೆ ತೃಪ್ತಿ ದಿಮ್ರಿ ನಾಯಕಿ

**ಬೆಂಗಳೂರು:** ರಾಕಿಂಗ್ ಸ್ಟಾರ್ ಯಶ್ ಸದ್ಯ ಪ್ಯಾನ್ ವರ್ಲ್ಡ್ ಚಿತ್ರಗಳಾದ ಟಾಕ್ಸಿಕ್ ಹಾಗೂ ರಾಮಾಯಣ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದು, ಅವರ ಮುಂದಿನ ಚಿತ್ರ ಯಾವುದು ಎಂಬ ಕುತೂಹಲ ಅಭಿಮಾನಿಗಳಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಈ ಮಧ್ಯೆ ಯಶ್ ಅವರ ಮುಂದಿನ ಸಿನಿಮಾ ಕುರಿತು ಸಾಮಾಜಿಕ ಜಾಲತಾಣಗಳು ಹಾಗೂ ಮನರಂಜನಾ ವಲಯದಲ್ಲಿ ಹೊಸ ಸುದ್ದಿ ಭಾರೀ ಸದ್ದು ಮಾಡುತ್ತಿದೆ. ಇದಕ್ಕೆ ಕಾರಣವಾಗಿರುವುದು ಅಂತಾರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಸಿನಿಮಾ ಡೇಟಾಬೇಸ್ ವೆಬ್‌ಸೈಟ್ ಐ ಎಂ ಡಿ ಬಿ ನಲ್ಲಿ ಕಾಣಿಸಿಕೊಂಡಿರುವ ಮಾಹಿತಿ.

ಯಶ್ ತಮ್ಮ ಮುಂದಿನ ಚಿತ್ರದಲ್ಲಿ ಮೊದಲ ಬಾರಿಗೆ ಖಾಕಿ ಖದರ್ ತೊಡಲಿದ್ದಾರೆ ಎಂಬ ಸುದ್ದಿ ಹರಿದಾಡುತ್ತಿದ್ದು, ಈ ಚಿತ್ರಕ್ಕೆ ನಾಯಕಿಯೂ ಫೈನಲ್ ಆಗಿದ್ದಾರೆ ಎನ್ನಲಾಗುತ್ತಿದೆ. ಈ ಮಾಹಿತಿ ಅಭಿಮಾನಿಗಳಲ್ಲಿ ಕುತೂಹಲ ಮೂಡಿಸಿದ್ದು, ಆ ಅದೃಷ್ಟಶಾಲಿ ನಾಯಕಿ ಯಾರು? ಚಿತ್ರದ ನಿರ್ದೇಶಕರು ಯಾರು? ಐಎಂಡಿಬಿ ನಲ್ಲಿ ಲೀಕ್ ಆಗಿದೆ ಎನ್ನಲಾಗುತ್ತಿರುವ ಮಾಹಿತಿ ಏನು ಎಂಬ ಚರ್ಚೆ ಶುರುವಾಗಿದೆ.

ಕೆಜಿಎಫ್ ಸರಣಿಯ ಜಾಗತಿಕ ಯಶಸ್ಸಿನ ಬಳಿಕ ರಾಕಿಂಗ್ ಸ್ಟಾರ್ ಯಶ್ ಪ್ಯಾನ್ ಇಂಡಿಯಾ ಮಟ್ಟವನ್ನು ಮೀರಿ ಪ್ಯಾನ್ ವರ್ಲ್ಡ್ ಪ್ರಾಜೆಕ್ಟ್‌ಗಳತ್ತ ಹೆಜ್ಜೆ ಇಟ್ಟಿದ್ದಾರೆ. ಟಾಕ್ಸಿಕ್ ಚಿತ್ರದ ಜೊತೆಗೆ ಬಹು ನಿರೀಕ್ಷಿತ ರಾಮಾಯಣ ಚಿತ್ರದಲ್ಲೂ ಅಭಿನಯಿಸುತ್ತಿರುವ ಅವರು, ನಿರ್ಮಾಪಕ ರಾಗಿಯೂ ಹೊಸ ಜವಾಬ್ದಾರಿ ಹೊತ್ತುಕೊಂಡಿದ್ದಾರೆ. ಈ ಎರಡು ಬೃಹತ್ ಚಿತ್ರಗಳ ಬಳಿಕ ಯಶ್ ಯಾವ ನಿರ್ದೇಶಕರ ಜೊತೆ ಕೈಜೋಡಿಸಲಿದ್ದಾರೆ ಎಂಬ ಪ್ರಶ್ನೆಗೆ ಈಗ ಹೊಸ ಉತ್ತರ ಸಿಕ್ಕಂತಾಗಿದೆ.

ಸದ್ಯ ಹರಿದಾಡುತ್ತಿರುವ ಮಾಹಿತಿಯ ಪ್ರಕಾರ, ಮಫ್ತಿ ಖ್ಯಾತಿಯ ನಿರ್ದೇಶಕ ನರ್ತನ್ ಅವರೊಂದಿಗೆ ಯಶ್ ಹೊಸ ಸಿನಿಮಾ ಮಾಡಲಿದ್ದಾರೆ ಎನ್ನಲಾಗುತ್ತಿದೆ. ಈ ಚಿತ್ರದಲ್ಲಿ ಒಬ್ಬ ಮಿಲಿಟರಿ ಅಧಿಕಾರಿ ನಂತರ ಪೊಲೀಸ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುವ ಕಥಾಹಂದರ ಇರಲಿದ್ದು, ಇದೇ ಮೊದಲ ಬಾರಿಗೆ ಯಶ್ ಖಾಕಿ ಉಡುಪಿನಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂಬ ಸುದ್ದಿ ವೈರಲ್ ಆಗಿದೆ. ಈ ಮಾಹಿತಿಯನ್ನು ಐ ಎಂ ಡಿ ಬಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎನ್ನಲಾಗುತ್ತಿದ್ದು, ಅಲ್ಲಿಯೇ ಚಿತ್ರದ ನಾಯಕಿಯ ಹೆಸರೂ ಉಲ್ಲೇಖಗೊಂಡಿರುವುದು ಅಭಿಮಾನಿಗಳ ಕುತೂಹಲವನ್ನು ಮತ್ತಷ್ಟು ಹೆಚ್ಚಿಸಿದೆ.



ಇನ್ನೂ ಈ ಚಿತ್ರದಲ್ಲಿ ಬಾಲಿವುಡ್ ನಟಿ ತೃಪ್ತಿ ದಿಮ್ರಿ ನಾಯಕಿಯಾಗಿ ನಟಿಸಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ. ಅನಿಮಲ್ ಚಿತ್ರದ ಮೂಲಕ ದೇಶಾದ್ಯಂತ ಅಪಾರ ಜನಪ್ರಿಯತೆ ಗಳಿಸಿರುವ ತೃಪ್ತಿ ದಿಮ್ರಿ, ಯುವ ಪ್ರೇಕ್ಷಕರ ಮೆಚ್ಚಿನ ನಟಿಯಾಗಿ ಹೊರಹೊಮ್ಮಿದ್ದಾರೆ. ಅವರ ಸೌಂದರ್ಯ ಹಾಗೂ ಅಭಿನಯಕ್ಕೆ ಬಾಲಿವುಡ್ ಪ್ರೇಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿದ್ದು, ಈಗ ಅವರು ಕನ್ನಡದ ಹೆಮ್ಮೆಯ ನಟ ಯಶ್‌ಗೆ ಜೋಡಿಯಾಗಲಿದ್ದಾರೆ ಎಂಬ ಸುದ್ದಿ ಅಭಿಮಾನಿಗಳಲ್ಲಿ ಸಂತಸ ಮೂಡಿಸಿದೆ.

ಆದರೆ, ಈ ಸುದ್ದಿ ಎಷ್ಟರ ಮಟ್ಟಿಗೆ ಸತ್ಯ ಎಂಬುದರ ಕುರಿತು ಸ್ಪಷ್ಟನೆ ಪಡೆಯಲು ಮುಂದಾದಾಗ, ನಿರ್ದೇಶಕ ನರ್ತನ್ ಸ್ವತಃ ಪ್ರತಿಕ್ರಿಯೆ ನೀಡಿದ್ದಾರೆ. ಮಫ್ತಿ ಚಿತ್ರದ ನಂತರ ಯಶ್ ಅವರಿಗಾಗಿ ಒಂದು ಕಥೆಯನ್ನು ಸಿದ್ಧಪಡಿಸಿರುವುದು ನಿಜ. ಆ ಕಥೆಯ ಮೂಲ ಕಲ್ಪನೆಯೇ ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಮಾಹಿತಿಗೆ ಆಧಾರವಾಗಿರಬಹುದು ಎಂದು ಅವರು ತಿಳಿಸಿದ್ದಾರೆ. ಆದರೆ, ಅದು ಈಗ ತಾವು ಆರಂಭಿಸಲು ಹೊರಟಿರುವ ಹೊಸ ಸಿನಿಮಾ ಅಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಇನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಕೆಲವು ವೆಬ್‌ಸೈಟ್‌ಗಳಲ್ಲಿ ಹ–ರಿದಾಡುತ್ತಿರುವ ಸ್ಟಾರ್‌ಕಾಸ್ಟ್ ಮಾಹಿತಿ ಅಧಿಕೃತವಾಗಿಲ್ಲ. ನಾಯಕಿ ಸೇ–ರಿದಂತೆ ಹಲವು ಪಾತ್ರಗಳ ಬಗ್ಗೆ ಹರಿದಾಡುತ್ತಿರುವ ಸುದ್ದಿಗಳು ವಾಸ್ತವಕ್ಕೆ ದೂರವಾಗಿದ್ದು, ಕೆಲವರು ತಮ್ಮದೇ ಆದ ರೀತಿಯಲ್ಲಿ ಸೃಷ್ಟಿಸಿಕೊಂಡ ಮಾಹಿತಿ ಯನ್ನು ಹಂಚಿ ಕೊಂಡಿದ್ದಾರೆ ಎಂದು ನರ್ತನ್ ಸ್ಪಷ್ಟನೆ ನೀಡಿದ್ದಾರೆ.

ಪ್ರಶಾಂತ್ ನೀಲ್ ಅವರ ತಂಡದಲ್ಲಿ ಕೆಲಸದ ಅನುಭವ ಹೊಂದಿರುವ ನಿರ್ದೇಶಕ ನರ್ತನ್, ಮಫ್ತಿ ಮತ್ತು ಬೈರತಿ ರಣಗಲ್ ಚಿತ್ರದ ಮೂಲಕ ತಮ್ಮದೇ ಆದ ಗುರುತನ್ನು ನಿರ್ಮಿಸಿಕೊಂಡಿದ್ದಾರೆ. ಸದ್ಯ ಅವರು ಕೆವಿಎನ್ ಪ್ರೊಡಕ್ಷನ್ಸ್ ಸಂಸ್ಥೆಯೊಂದಿಗೆ ಹೊಸ ಚಿತ್ರವೊಂದಕ್ಕೆ ಕೈಜೋಡಿಸಿರುವುದು ಖಚಿತವಾಗಿದ್ದು, ಆ ಚಿತ್ರದಲ್ಲಿ ಯಾವ ಸ್ಟಾರ್ ನಟಿಸಲಿದ್ದಾರೆ ಎಂಬುದರ ಬಗ್ಗೆ ಮಾತ್ರ ಇನ್ನೂ ಅಧಿಕೃತ ಘೋಷಣೆ ಹೊರಬಂದಿಲ್ಲ.

ಒಟ್ಟಾರೆ, ಯಶ್ ಅವರ ಮುಂದಿನ ಸಿನಿಮಾ ಕುರಿತು ಹರಿದಾಡುತ್ತಿರುವ ಈ ಸುದ್ದಿಗಳು ಅಭಿಮಾನಿಗಳಲ್ಲಿ ಹೊಸ ನಿರೀಕ್ಷೆ ಮೂಡಿಸಿದರೂ, ಅಧಿಕೃತ ಘೋಷಣೆ ಹೊರಬರುವರೆಗೂ ಈ ಮಾಹಿತಿಗಳನ್ನು ಊಹಾಪೋಹಗಳಾಗಿಯೇ ಪರಿಗಣಿಸಬೇಕಾಗಿದೆ.

ಇದೀಗ ಐ ಎಂ ಡಿ ಬಿ ನಲ್ಲಿ ಕಾಣಿಸಿಕೊಂಡಿರುವ ಮಾಹಿತಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಹ–ರಿದಾಡುತ್ತಿರುವ ಸುದ್ದಿಗಳು ಸಿನಿಪ್ರಿಯರ ಕುತೂಹಲವನ್ನು ಮತ್ತಷ್ಟು ಹೆಚ್ಚಿಸಿವೆ. ಆದರೆ, ನಿರ್ದೇಶಕ ನರ್ತನ್ ಅವರ ಸ್ಪಷ್ಟನೆಯ ಬಳಿಕ ಯಶ್ ಅವರ ಮುಂದಿನ ಸಿನಿಮಾ ಕು–ರಿತು ಅಧಿಕೃತ ಘೋಷಣೆಯ ನಿರೀಕ್ಷೆ ಇನ್ನಷ್ಟು ಹೆಚ್ಚಾಗಿದ್ದು, ಟಾಕ್ಸಿಕ್ ಮತ್ತು ರಾಮಾಯಣ ಚಿತ್ರಗಳ ಬಳಿಕ ರಾಕಿಂಗ್ ಸ್ಟಾರ್ ಯಾವ ಹೊಸ ಅವತಾರದಲ್ಲಿ ಅಭಿಮಾನಿಗಳ ಮುಂದೆ ಬರಲಿದ್ದಾರೆ ಎಂಬುದನ್ನು ಕಾದು ನೋಡಬೇಕಿದೆ ರಾಕಿಂಗ್ ಸ್ಟಾರ್ ಯಶ್ ಅವರ ಮುಂದಿನ ಚಿತ್ರದ ಕುರಿತು ಹ–ರಿದಾಡುತ್ತಿರುವ ಸುದ್ದಿಗಳು ಸಿನಿರಂಗದಲ್ಲಿ ಹೊಸ ಚರ್ಚೆಗೆ ಕಾರಣವಾಗಿವೆ. ಖಾಕಿ ಖದರ್‌ನಲ್ಲಿ ಯಶ್ ಕಾಣಿಸಿಕೊಳ್ಳಲಿದ್ದಾರೆ ಎಂಬ ಸುದ್ದಿ ಅಭಿಮಾನಿಗಳಲ್ಲಿ ಭಾರೀ ನಿರೀಕ್ಷೆ ಮೂಡಿ ಸಿದರೂ, ಚಿತ್ರ ತಂಡದಿಂದ ಅಧಿಕೃತ ಘೋಷಣೆ ಹೊರ ಬರುವವರೆಗೆ ಈ ಎಲ್ಲ ಮಾಹಿತಿಗಳು ಊಹಾಪೋಹ ಗಳಾಗಿಯೇ ಉಳಿಯಲಿವೆ. ಸದ್ಯ ಯಶ್ ಅವರ ಮುಂದಿನ ಹೆಜ್ಜೆಯತ್ತ ಇಡೀ ಭಾರತೀಯ ಚಿತ್ರರಂಗದ ಗಮನ ನೆಟ್ಟಿದೆ..

